## 5

# ಬಯಲಾದ ಒಂದು ರಹಸ್ಯ

## (ಯೋಹಾನ 14)

*"ನಾನು ನಿಮ್ಮನ್ನು ಅನಾಥರಾಗಿ ಬಿಡುವದಿಲ್ಲ; ನಿಮ್ಮ ಬಳಿಗೆ ಬರುತ್ತೇನೆ. ಇನ್ನು ಸ್ವಲ್ಪಕಾಲ ವಾದ ಮೇಲೆ ಲೋಕವು ನನ್ನನ್ನು ನೋಡುವದಿಲ್ಲ, ಆದರೆ ನೀವು ನನ್ನನ್ನು ನೋಡುವಿರಿ; ನಾನು ಬದುಕುವದರಿಂದ ನೀವೂ ಬದುಕುವಿರಿ. ನಾನು ನನ್ನ ತಂದೆಯಲ್ಲಿಯೂ ನೀವು ನನ್ನಲ್ಲಿಯೂ ನಾನು ನಿಮ್ಮಲ್ಲಿಯೂ ಇರುವದನ್ನು ನೀವು ಆ ದಿನದಲ್ಲಿ ತಿಳಿದುಕೊಳ್ಳುವಿರಿ. ನನ್ನ ಆಜ್ಞೆಗಳನ್ನು ಹೊಂದಿ ಅವುಗಳನ್ನು ಕೈಕೊಂಡು ನಡೆಯುವವನೇ ನನ್ನನ್ನು ಪ್ರೀತಿ ಸುವವನು. ನನ್ನನ್ನು ಪ್ರೀತಿಸುವವನು ನನ್ನ ತಂದೆಗೆ ಪ್ರಿಯನಾಗಿರುವನು; ನಾನೂ ಅವನನ್ನು ಪ್ರೀತಿಸಿ ಅವನಿಗೆ ಕಾಣಿಸಿಕೊಳ್ಳುವೆನು ಎಂದು ಹೇಳಿದನು. ಯೂದನು (ಇವನು ಇಸ್ಕರಿಯೋತನಲ್ಲ) - ಸ್ವಾಮೀ, ನೀನು ಲೋಕಕ್ಕೆ ಕಾಣಿಸಿಕೊಳ್ಳದೆ ನಮಗೆ ಮಾತ್ರ ಕಾಣಿಸಿಕೊಳ್ಳುವದಕ್ಕೆ ಏನು ಸಂಭವಿಸಿತು ಎಂದು ಕೇಳಿದ್ದಕ್ಕೆ ಯೇಸು ಅವನಿಗೆ - ಯಾರಾದರೂ ನನ್ನನ್ನು ಪ್ರೀತಿಸುವವನಾರೆ ನನ್ನ ಮಾತನ್ನು ಕೈಕೊಂಡು ನಡೆಯುವನು; ಅವನನ್ನು ನನ್ನ ತಂದೆಯು ಪ್ರೀತಿಸುವನು, ಮತ್ತು ನಾವಿಬ್ಬರೂ ಅವನ ಬಳಿಗೆ ಬಂದು ಅವನ ಬಳಿಯಲ್ಲಿ ಬಿಡಾರವನ್ನು ಮಾಡಿಕೊಳ್ಳುವೆವು. ನನ್ನನ್ನು ಪ್ರೀತಿಸದೆ ಇರುವವನು ನನ್ನ ಮಾತುಗಳನ್ನು ಕೈಕೊಂಡು ನಡೆಯುವದಿಲ್ಲ; ನೀವು ಆಲಿಸುವ ಮಾತು ನನ್ನದಲ್ಲ, ನನ್ನನ್ನು ಕಳುಹಿಸಿದ ತಂದೆಯ ಮಾತೇ" (ವಚನಗಳು 18-24).*

ಯೇಸು ಕ್ರೂಜಿತನಾಗುವ ಮೊದಲು ತನ್ನ ಅಪೊಸ್ತಲರೊಂದಿಗೆ ಗುರುವಾರ ರಾತ್ರಿ ಮಾತನಾಡಿ, ತಾನು ಅವರನ್ನು ಬಿಟ್ಟು ಹೋಗುವವನೆಂಬ ಗಾಬರಿಪಡಿಸುವ ವಿಚಾರವನ್ನು ತಿಳಿಸಿದನು. ಆತನು ತಂದೆಯ ಬಳಿಗೆ ಹೋಗುವ ವಿಚಾರದ ಗ್ರಹಿಕೆ ಅವರಿಗೆ ಉಂಟಾಗಲಿಲ್ಲ (14:12), ಆದರೆ ಈ ವಿಷಯದಲ್ಲಿ ಅವರು ಭ್ರಾಂತಿಯನ್ನು, ಗಲಿಬಿಲಿಯನ್ನು ಒಂಟಿತನವನ್ನು ಮತ್ತು ಅನಿಶ್ಚಯವನ್ನು ಹೊಂದಿದ್ದರು. ಆತನಿಂದ ಅವರು ನಿರಂತರವಾಗಿ ಪ್ರತ್ಯೇಕವಾಗಿರಬೇಕೆಂಬ ಆಲೋಚನೆಯು ಅವರನ್ನು ದುಃಖದ ಈಟಿಯಿಂದ ತಿವಿದಂತೆ ಮಾಡಿತು. ಈಗ ನಾವೇನು ಮಾಡೋಣ? ನಮ್ಮ ಭವಿಷ್ಯತ್ತಿನ ಗತಿಯೇನು? ಇದನ್ನು ನಾವು ಹೇಗೆ ಸಹಿಸೋಣ? ಇಂತಹ ಇನ್ನು ಅನೇಕ ಪ್ರಶ್ನೆಗಳು ಅವರ ಆಲೋಚನೆಗೆ ಬಂದಿರಬಹುದು. ಅವರು ಯೇಸುವಿನೊಂದಿಗೆ ಕಳೆದ ಮೂರ ವರ್ಷಗಳು ಬಲ ಮತ್ತು ಅವರು ಆತನ ಕುರಿಗಳಾ ಗಿದ್ದರು. ಅವರು ಎಲ್ಲವನ್ನು ತೊರೆದು ಆತನನ್ನು ಹಿಂಬಾಲಿಸಿದ್ದರು, ಆದರೆ ಈಗ ಅವರು ಏಕಾಂಗಿಗಳಾದರೆಂದು ಭಾವಿಸಿದರು.

ಅವರು ಗೊಂದಲದ ಹೃದಯವನ್ನು ಯೇಸು ಗಮನಿಸಿ, ಆತನಂತೆ ಇರುವ ಮತ್ತೊಬ್ಬ ಸಹಾಯಕನನ್ನು ಕೊಡುವೆನೆಂದು ವಾಗ್ದಾನ ಮಾಡಿದನು. "ನಾನು ನಿಮ್ಮನ್ನು ಅನಾಥರನ್ನಾಗಿ ಬಿಡುವದಿಲ್ಲ; ಆತನು ಅವರಿಗೆ, ನಾನು ನಮ್ಮ ಬಳಿಗೆಬರುವೆನು" ಅಂದನು (14:18). "ಅನಾಥರು" ಎಂಬ ಆತನ ಪದದ ಅರ್ಥ (ಅರ್ಫನೋಸ್) ಹೊಸ ಒಡಂಬಡಿಕೆಯಲ್ಲಿ ಈ ಪದವನ್ನು ಎರಡು ಸಾರಿ ಮಾತ್ರ ಬಳಸಲಾಗಿದೆ. ಈ ಸ್ಥಳದಲ್ಲಿ ಮತ್ತು ಯಾಕೋಬ 1:27ರಲ್ಲಿ, ಅಪೊಸ್ತಲರು ಯಾರ ಆಧಾರವಿಲ್ಲದೆ ಉಳಿಯಬೇಕಾಯಿತು ಎಂಬ ಅರ್ಥ.

"ಸ್ವಲ್ಪ ಕಾಲದ ನಂತರ" - ಅಂದರೆ ಮರಣ, ಪುನರುತ್ಥಾದ ಮತ್ತು ಪಂಚಾಶತ್ತಮ

ದಿನದವರೆಗೆ - ನಂತರ ಆತನು ಅವರಿಗೆ ಕಾಣಿಸಿಕೊಳ್ಳುವನು ಎಂದನು. "ಸ್ವಲ್ಪ ಕಾಲದ ನಂತರ" ಎಂದು ಬಹಳ ಸಮಾಧಾನದಿಂದ ಹೇಳಿದನು - ಲೋಕವು "ನನ್ನನ್ನು ನೋಡುವದಿಲ್ಲ" ಆದರೆ ನೀವು ನನ್ನನ್ನು ನೋಡುವಿರಿ; "ನಾನು ಬದುಕುವದರಿಂದ ನೀವೂ ಬದುಕುವಿರಿ" (14:19). ಈ ಪ್ರಕಟನೆಯನ್ನು ಆತನು ತನ್ನ ಅಪೊಸ್ತಲರಿಗೆ ಹೇಳಿದನೇ ಹೊರತು ಲೋಕ ವನ್ನುದ್ದೇಶಿಸಿ ಹೇಳಲಿಲ್ಲ. ಈ ಹಿಂದೆ ಕಾಣಿಸಿಕೊಂಡಂತೆ ತಾನು ದೈಹಿಕ ಆಕಾರದಲ್ಲಿ ಪುನಃ ಕಾಣಿಸಿಕೊಳ್ಳುವದಿಲ್ಲ, ಆದರೆ ಪುನರುತ್ಥಾನವಾದ ದೇಹವನ್ನು ಅಪೊಸ್ತಲರಿಗೂ ಮತ್ತು ವಿಧೇ ಯರಿಗೂ ತೋರುವವನಾಗಿದ್ದನು.

ಆತನನ್ನು ಅವರು ಪುನಃ ನೋಡುವಾಗ, ಅವರು ಆತನ ಕುರಿತಾದ ವಿಶೇಷವಾದ ಜ್ಞಾನವನ್ನು ಪಡೆದರು. ಈ ಕಾರ್ಯದ ಮೂಲಕ ತಾನು ಮತ್ತು ತಂದೆಯೂ ಒಂದೇ ಎಂಬುದನ್ನು ಅರಿತವರಾದರು. ಈ ಸತ್ಯದ ಬಗ್ಗೆ ಒಂದು ಸಂಗತಿಯು ಅವರಿಗೆ ಪ್ರಕಟವಾಯಿತು, ಅವರು ಆತನಲ್ಲಿಯೂ ಆತನು ಅವರಲ್ಲಿಯೂ ನೆಲೆಸಿರುವದು ಸ್ಪಷ್ಟ ವಾಯಿತು, "ನಾನು ನನ್ನ ತಂದೆಯಲ್ಲಿಯೂ ನೀವು ನನ್ನಲ್ಲಿಯೂ ನಾನು ನಿಮ್ಮಲ್ಲಿಯೂ ಇರುವದನ್ನು ನೀವು ಆ ದಿನದಲ್ಲಿ ತಿಳಿದು ಕೊಳ್ಳುವಿರಿ" (14:20).

ಅವರು ಜ್ಞಾನವನ್ನು ಮಾತ್ರ ಪಡೆಯದೆ, ಆತನೊಂದಿಗಿನ ವ್ಯಕ್ತಿಗತವಾದ ಅನ್ಯೋ ನ್ಯತೆಯು ಸಹ ವೃದ್ಧಿಯಾಯಿತು. ಅವರಿಗೆ ಮಹಾ ರಹಸ್ಯದ ಅನುಭವ ಉಂಟಾಯಿತು. ಲೋಕವು ನೋಡಲಪೇಕ್ಷೆಪಟ್ಟ ಪ್ರಕಟನೆಯ ಅನುಭವವಾಯಿತು. ಯೇಸು ಅವರಿಗೆ, "ನನ್ನ ಆಜ್ಞೆಗಳನ್ನು ಹೊಂದಿ ಅವುಗಳನ್ನು ಕೈಕೊಂಡು ನಡೆಯುವವನೇ ನನ್ನನ್ನು ಪ್ರೀತಿಸುವವನು, ನನ್ನನ್ನು ಪ್ರೀತಿಸುವವನು ನನ್ನ ತಂದೆಗೆ ಪ್ರಿಯನಾಗಿರುವನು ನಾನೂ ಅವನನ್ನು ಪ್ರೀತಿಸಿ ಅವನಿಗೆ ಕಾಣಿಸಿಕೊಳ್ಳುವೆನು ಎಂದು ಹೇಳಿದನು" (14:21). ಆತನ ಈ ರಹಸ್ಯವು ವ್ಯಕ್ತಿಗತ ಹಾಗೂ ಖಾಸಗಿ ಪ್ರಕಟನೆಯಾಗಿತ್ತು.

ಈ ಮಾತುಗಳನ್ನು ಅವರು ಗ್ರಹಿಸುವದು ಕಷ್ಟಕರವಾಗಿತ್ತು (ಇಸ್ಕರಿಯೊತನಲ್ಲದ) ಯೂದನು ಆತನಿಗೆ, "ಸ್ವಾಮಿ ನೀನು ಲೋಕಕ್ಕೆ ಕಾಣಿಸಿಕೊಳ್ಳದೆ ನಮಗೆ ಮಾತ್ರ ಕಾಣಿಸಿಕೊಳ್ಳುವದೇಕೆ?" (14:22) ಎಂದನು. ಅಂದರೆ ಮುಂದಿನ ಭವಿಷ್ಯದಲ್ಲಿ ಯೇಸು ಲೋಕಕ್ಕೆ ತನ್ನನ್ನು ಪ್ರಕಟಿಸಿಕೊಳ್ಳುವನು ಎಂಬುದು ಯೂದನ ಯೋಚನೆ ಯಾಗಿತ್ತು ಆದರೆ ಯೂದನು ದೇವರ ಯೋಜನೆಯನ್ನು (ನಮ್ಮಲ್ಲಿ ಕೆಲವರ ಹಾಗೆ) ಅಪಾರ್ಥಮಾಡಿಕೊಂಡಿದ್ದನು, ಯೇಸುವಿಗೆ ವಿಧೇಯರಾದವರ ಸಂಗಡ, ಯೇಸು ವಾಸಿಸುವನು ಎಂಬದು ದೇವರ ಯೋಜನೆಯಾಗಿತ್ತು. ಆದುದರಿಂದ ಯೇಸು ಯೂದನಿಗೆ, "ಯಾರಾದರೂ ನನ್ನನ್ನು ಪ್ರೀತಿ ಸುವದಾದರೆ, ನನ್ನ ಮಾತನ್ನು ಕೈಕೊಂಡು ನಡೆಯುವನು. ಅವನನ್ನು ನನ್ನ ತಂದೆಯು ಪ್ರೀತಿಸುವನು ಮತ್ತು ನಾವಿಬ್ಬರೂ ಅವನ ಬಳಿಗೆ ಬಂದು ಬಿಡಾರವನ್ನು ಮಾಡಿಕೊಳ್ಳುವೆವು ಅಂದನು" (14:23).

ಆದ್ದರಿಂದ ಇದು ಬಯಲಾದ ಒಂದು ಮಹಾ ರಹಸ್ಯವಾಗಿದೆ. ಅದೇನೆಂದರೆ, ತಂದೆಯಾದ ದೇವರು ಮತ್ತು ಮಗನಾದ ಯೇಸು ಕ್ರಿಸ್ತನು ನಮ್ಮೊಂದಿಗೆ ಇರುವಂಥದ್ದೇ ಆಗಿರುತ್ತದೆ. "ಅವರು ಬಂದು ನಮ್ಮಲ್ಲಿ ಮನೆ ಮಾಡುವರು" ಮಾನವನ ಇತಿಹಾಸದಲ್ಲಿ ಈ ವಿಧವಾದ ಅನುಭವವು ಮಾತ್ರ ಮಹತ್ವದ್ದಾಗಿದೆ. ಯೇಸುವಿನ ಜನನದಲ್ಲಿ ಆತನಿಗೆ "ಇಮ್ಮಾನುವೇಲ್" ಎಂಬ ಹೆಸರು ನೀಡಲಾಯಿತು, ಅಂದರೆ "ದೇವರು ನಮ್ಮೊಂದಿಗಿದ್ದಾರೆ" ಎಂಬ ಅರ್ಥ (ಮತ್ತಾಯ 1:23). ದೇವರು ನಮ್ಮೊಂದಿಗಿದ್ದಾನೆ ಎಂಬ ತತ್ವವನ್ನು ಹಳೆಯ ಒಡಂಬಡಿಕೆ ಹಾಗೂ ಹೊಸ ಒಡಂಬಡಿಕೆಯೂ ಊರ್ಜಿತಗೊಳಿಸುತ್ತದೆ. ಯೋಹಾನನು ಬರೆದು, ನಾವು "ಕಂಡು ಕೇಳಿದ್ದು ನಿಮಗೂ ಗೊತ್ತಾಗಿ ನಮಗಿರುವ ಅನ್ಯೋನ್ಯತೆಯಲ್ಲಿ ನೀವು ಸೇರಬೇಕೆಂದು ಅದನ್ನು ನಿಮಗೆ ಪ್ರಸಿದ್ಧಿಪಡಿಸುತ್ತೇವೆ. ನಮಗಿರುವ ಅನ್ಯೋನ್ಯತೆಯು ತಂದೆಯ ಸಂಗಡಲೂ ಆತನ ಮಗನಾದ ಯೇಸು ಕ್ರಿಸ್ತನ ಸಂಗಡಲೂ ಇರುವಂಥದ್ದು"

(1 ಯೋಹಾನ 1:3). ಯೇಸು ತನ್ನ ಅಪೊಸ್ತಲರಿಗೆ,

> ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವೆನು. ಆ ಸಹಾಯಕನು ಯಾರಂದರೆ ಸತ್ಯದ ಆತ್ಮನೇ. ಲೋಕವು ಆತನನ್ನು ನೋಡದೆಯೂ ತಿಳಿಯದೆಯೂ ಇರುವದರಿಂದ ಆತನನ್ನು ಹೊಂದಲಾರದು (ಯೋಹಾನ 14:16, 17).

ಈ ಸತ್ಯವು ಅದ್ಭುತವಾದ ಉತ್ತೇಜನವನ್ನು ನೀಡುತ್ತದೆ ಆದರೆ, ಅದು ಯಾವ ರೀತಿಯಲ್ಲಿ ಉಂಟಾಗುತ್ತದೆ ಎಂಬ ಪ್ರಶ್ನೆ ಉಂಟಾಗುತ್ತದೆ? ಹೌದು ಪ್ರಪಂಚವು ಕರ್ತನ ಪ್ರಸನ್ನತೆಯ ಅನುಭವವನ್ನು ಹೊಂದಲಾರದು, ಆದರೆ ಇದನ್ನು ಹೊಂದಲು ಒಬ್ಬ ವಿಶ್ವಾಸಿ ಏನು ಮಾಡ ಬೇಕು? *ಕ್ರಿಸ್ತನ ಪ್ರಸನ್ನತೆಯನ್ನು ಹೊಂದುವ ಮಾರ್ಗ ಯಾವದು?*

## ನಂಬಿಕೆ

*ಮೊದಲನೆಯದಾಗಿ ಇದು ನಂಬಿಕೆಯ ವಿಚಾರವಾಗಿದೆ.* ದೇವರು ತಿಳಿಸಿರುವ ವಿಚಾರದಲ್ಲಿ ಭರವಸೆಯನ್ನು ಪ್ರೀತಿಯನ್ನು ಇಟ್ಟು ನಂಬುವದೇ ಆಗಿದೆ. ನಂಬಿಕೆಯು, ನಾವು ಕ್ರಿಸ್ತನಲ್ಲಿ ಹೊಂದಿರುವ ಬಾಂದವ್ಯವಾಗಿದ್ದು, ಆತನ ಮಾತುಗಳಲ್ಲಿ ಭರವಸೆಯಿಟ್ಟು, ಅದನ್ನು ಒಪ್ಪಿಕೊಳ್ಳುವ ಸಂಗತಿಯಾಗಿದೆ. ಆತನೇಳಿದ್ದೇನೆಂದರೆ, "ಇನ್ನು ಸ್ವಲ್ಪಕಾಲವಾದ ಮೇಲೆ ಲೋಕವು ನನ್ನನ್ನು ನೋಡುವದಿಲ್ಲ, ಆದರೆ ನೀವು ನನ್ನನ್ನು ನೋಡುವಿರಿ" (14:19). ಆತನು ವಾಗ್ದಾನ ಮಾಡಿ, ನಾವು ಆತನನ್ನು ನೋಡಿ ಬದುಕುವೆವು ಎಂದಿರುವನು. ಆತನಲ್ಲಿ ನಂಬಿಕೆ ಇಟ್ಟಿರುವವನು ಮಾತ್ರ ಈ ವಾಗ್ದಾನದ ನೆರವೇರಿಕೆಯನ್ನು ಅನುಭವಿಸಲು ಸಾಧ್ಯ.

## ಪ್ರೀತಿ

*ಎರಡನೆಯದಾಗಿ, ಆತನನ್ನು ಪ್ರೀತಿಸುವದು ಚಿತ್ರಣದ ಒಂದು ಭಾಗವಾಗಿದೆ.* ಪ್ರೀತಿ, ನಂಬಿಕೆ ಒಟ್ಟಾಗಿರುತ್ತವೆ. ಒಂದು ಮತ್ತೊಂದಕ್ಕೆ ನಡೆಸುತ್ತದೆ. ನಂಬಿಕೆಯು ಆತನ ವಾಕ್ಯಗಳಿಗೂ; ಪ್ರೀತಿಯು ಆತನ ಹೃದಯಕ್ಕೂ ನಡೆಸುತ್ತದೆ. ಆತನನ್ನು ಪ್ರೀತಿಸುವದು ಎಂದರೆ, ಆತನು ನೀಡಿರುವ ಸಂತಸದಲ್ಲಿ ಮುಂದುವರೆಯುವದು ಎಂಬ ಅರ್ಥ. ಆತನು ಮಾಡಿರುವ ಕಾರ್ಯಗಳಿಗೆ ಕೃತಜ್ಞರಾಗಿರುವದು, ಆತನ ಉತ್ತಮ ಗುಣವನ್ನು ಪ್ರಶಂಶಿಸುವದು, ಮತ್ತು ಆತನ ವಿವೇಕಕ್ಕೆ ಗೌರವ ಸಲ್ಲಿಸುವದು, ಆತನ ಶಿಷ್ಯರನ್ನಾಗಿ ಸಮರ್ಪಿಸಿಕೊಳ್ಳುವದು ಆಗಿದೆ. ನಾವು ಓದುವಂತೆ, "ನನ್ನ ಆಜ್ಞೆಗಳನ್ನು ಹೊಂದಿ ಅವುಗಳನ್ನು ಕೈಕೊಂಡು ನಡೆಯುವವನೇ ನನ್ನನ್ನು ಪ್ರೀತಿಸುವವನು. ನನ್ನ ತಂದೆಗೆ ಪ್ರಿಯನಾಗಿರುವನು ನಾನೂ ಅವನನ್ನು ಪ್ರೀತಿಸಿ ಅವನಿಗೆ ಕಾಣಿಸಿಕೊಳ್ಳುವೆನು" ಎಂದು ಹೇಳಿದನು (14:21). ಆತನನ್ನು ಪ್ರೀತಿಸುವವರೊಂದಿಗೆ ತಂದೆ ಮತ್ತು ಮಗನು ಒಂದಾಗಿರುವರು.

## ವಿಧೇಯತೆ

*ಮೂರನೆಯದಾಗಿ, ವಿಧೇಯತೆಯ ಅಗತ್ಯವಿದೆ.* ಪ್ರೀತಿ ಮತ್ತು ನಂಬಿಕೆ ಕ್ರಿಸ್ತನ ಮಾತುಗಳನ್ನು ಒಪ್ಪುವಂತೆ ಮಾಡುತ್ತದೆ.

> ಯೇಸು ಅವನಿಗೆ - ಯಾರಾದರೂ ನನ್ನನ್ನು ಪ್ರೀತಿಸುವವನಾರೆ ನನ್ನ ಮಾತನ್ನು ಕೈಕೊಂಡು ನಡೆಯುವನು; ಅವನನ್ನು ನನ್ನ ತಂದೆಯು ಪ್ರೀತಿಸುವನು, ಮತ್ತು ನಾವಿಬ್ಬರೂ ಅವನ ಬಳಿಗೆ ಬಂದು ಅವನ ಬಳಿಯಲ್ಲಿ ಬಿಡಾರವನ್ನು ಮಾಡಿಕೊಳ್ಳುವೆವು.

> ನನ್ನನ್ನು ಪ್ರೀತಿಸದೆ ಇರುವವನು *ನನ್ನ* ಮಾತುಗಳನ್ನು ಕೈಕೊಂಡು ನಡೆಯುವದಿಲ್ಲ; ನೀವು ಆಲಿಸುವ ಮಾತು ನನ್ನದಲ್ಲ, ನನ್ನನ್ನು ಕಳುಹಿಸಿದ ತಂದೆಯ ಮಾತೇ (14:23, 24; ಒತ್ತಿ ಹೇಳಿದ್ದು ನನ್ನದು).

ಆತನ ಮಗನನ್ನು ಪ್ರೀತಿಸುವವನನ್ನು ಪರಲೋಕದ ತಂದೆಯು ವಿಶೇಷವಾಗಿ ಪ್ರೀತಿಸುತ್ತಾನೆ.

## ಮುಕ್ತಾಯ

ಒಂದು ಪ್ರಮುಖವಾದ ರಹಸ್ಯವನ್ನು ವಿಮೋಚನಕಾಂಡ 33:17-23ರಲ್ಲಿ ಬಹಿರಂಗಗೊಳಿಸಲಾಗಿದೆ. ಮೋಶೆಯು ದೇವರನ್ನು ಪ್ರಾರ್ಥಿಸಿ, "ನಿನ್ನ ಮಹಿಮೆಯನ್ನು ದಯಮಾಡಿ ನನಗೆ ತೋರಿಸು" ಅಂದನು (ವಿಮೋಚನಕಾಂಡ 33:18). ದೇವರು ಅದಕ್ಕೆ "ನನ್ನ ಸರ್ವೋತ್ತಮತ್ವವನ್ನು ನಿನ್ನೆದುರಾಗಿ ದಾಟಿ ಹೋಗುವಂತೆ ಮಾಡುವೆನು, ಯೆಹೋವನ ನಾಮದ ಮಹತ್ವವನ್ನು ನಿನ್ನೆದುರಾಗಿ ಪ್ರಕಟಿಸುವೆನು ..." (ವಿಮೋಚನಕಾಂಡ 33:19). ಮೋಶೆಗೆ ತನ್ನ ಮುಖವನ್ನು ತೋರಿಸದೆ, ಹಿಂಬಾಗದ ಮಹಿಮೆಯನ್ನು ಮಾತ್ರ ತೋರಿ ದನು. ದೇವರು ತಾನು ಮೋಶೆಯ ಮುಂದೆ ಹಾದುಹೋಗುವಾಗ ಮೋಶೆಯನ್ನು ಬಂಡೆಯ ಬಿರುಕಿನಲ್ಲಿ ಅಡಗಿಸಿದ್ದನು. ದೇವರು ಮೋಶೆಯ ಮುಖದ ಮೇಲಿದ್ದ ತನ್ನ ಕೈಗಳನ್ನು ತೆಗೆದು, ತನ್ನ ಬೆನ್ನಿನ ಭಾಗದ ಮಹಿಮೆಯನ್ನು ಮಾತ್ರ ನೋಡುವಂತೆ ಮಾಡಿದನು. ಮೋಶೆಗೆ ಎಂಥಾ ಒಂದು ವಿಶೇಷವಾದ ಅನುಭವ ದೊರೆಯಿತು! ಇದು ಹಳೇ ಒಡಂಬಡಿಕೆಯಲ್ಲಿರುವ ಒಂದೇ ಒಂದು ನಿದರ್ಶನವಾಗಿದೆ.

ಹಳೇ ಒಡಂಬಡಿಕೆಯ ಈ ನಿದರ್ಶನದಂತೆ, ಯೇಸು ಪ್ರತಿಯೊಬ್ಬರಿಗೂ ಬಹಿರಂಗ ಪಡಿಸುವವನಾಗಿದ್ದಾನೆ - ಆತನು ತಾನು ನಮ್ಮೊಂದಿಗಿರುವನು ಎಂಬ ಪ್ರಕಟನೆಯನ್ನು ತೋರಿಸುತ್ತಾನೆ. ಆತನ ಬೋಧನೆಗಳ ಮುಖಾಂತರ, ಆತನು ತಂದೆಯೊಂದಿಗೆ ಒಂದಾಗಿರುವನು, ನಮ್ಮನ್ನು ತನ್ನಲ್ಲಿಗೆ ಸ್ವೀಕರಿಸಿರುವನು. ನಮ್ಮಲ್ಲಿರುವನು ಹಾಗೂ ತಂದೆಯನ್ನು ನಮಗೆ ತೋರ್ಪಡಿಸಿರುವನು ಎಂದು ಪ್ರಕಟಿಸಿದ್ದಾನೆ.

---

*ನಾವು ಆತನ ಆಜ್ಞೆಗಳನ್ನು ಕೈಕೊಂಡು ನಡೆದರೆ ಅದರಿಂದಲೇ ಆತನನ್ನು ಬಲ್ಲವರಾಗಿದ್ದೇವೆಂದು ತಿಳುಕೊಳ್ಳುತ್ತೇವೆ. ಆತನನ್ನು ಬಲ್ಲೆನೆಂದು ಹೇಳಿ ಆತನ ಆಜ್ಞೆಗಳನ್ನು ಕೈಕೊಳ್ಳದೆ ನಡೆಯುವವನು ಸುಳ್ಳುಗಾರನಾಗಿದ್ದಾನೆ; ಸತ್ಯವೆಂಬದು ಅವನಲ್ಲಿ ಇಲ್ಲ. ಯವನಾದರೂ ಆತನ ವಾಕ್ಯವನ್ನು ಕೈ ಕೊಂಡು ನಡೆದರೆ ಅವನಲ್ಲಿ ನಿಜವಾಗಿ ದೇವರ ಮೇಲಣ ಪ್ರೀತಿಯು ಪರಿಪೂರ್ಣವಾಗಿದೆ. ಇದರಿಂದಲೇ ಆತನಲ್ಲಿದ್ದೇವೆಂಬದನ್ನು ತಿಳುಕೊಳ್ಳುತ್ತೇವೆ. ಆತನಲ್ಲಿ ನೆಲೆಗೊಂಡವನಾಗಿದ್ದೇನೆಂದು ಹೇಳುವವನು ಕ್ರಿಸ್ತನು ನಡೆದಂತೆಯೇ ತಾನೂ ನಡೆಯುವದಕ್ಕೆ ಬದ್ಧನಾಗಿದ್ದಾನೆ (1 ಯೋಹಾನ 2:3-6).*